# ದಲಿತ ವಚನಕಾರರು ವಾಸ್ತವತೆಯ ಹರಿಕಾರರು

ಹೊಸಪೇಟೆ

ದಲಿತ ವಚನಕಾರರು ವಾಸ್ತವತೆಯ ಹರಿಕಾರರಾಗಿದ್ದು, ಇಲ್ಲದ ಕಲ್ಪನೆಗಳ ಮೇಲೆ ವಚನ ರಚಿಸಿದವರಲ್ಲ ಎಂದು ಡಾ||ಅಕ್ಕಮಹಾದೇವಿ ತಿಳಿಸಿದರು. ತಾಲೂಕು ಆಡಳಿತ ಮಂಡಳಿ ವತಿಯಿಂದ ಪತ್ರಿಕಾ ಭವನದಲ್ಲಿ ಬೆಳಿಗ್ಗೆ ಹಮ್ಮಿಕೊಳ್ಳಲಾಗಿದ್ದ ದಲಿತ ವಚನಕಾರರ ಜಯಂತಿಯಲ್ಲಿ ಉಪನ್ಯಾಸ ನೀಡಿ ಮಾತನಾಡಿ, ನುಡಿದಂತೆ ನಡೆಯಬೇಕು ಎಂಬ ವಾಸ್ತವತೆಯನ್ನು ಮಾದಾರ ಚನ್ನಯ್ಯ ತನ್ನ ವಚನದಲ್ಲಿ, ನಡೆನುಡಿ ಸಿದ್ಧಾಂತವಾದಲ್ಲಿ ಕುಲ-ಹೊಲೆ ಸೂತಕವಿಲ್ಲ, ನುಡಿಲೇಸು ನಡೆಯಧಮವಾದಲ್ಲಿ ಎಂದು ತಿಳಿಸುತ್ತಾನೆ. ಹಾಗೆಯೇ ಉರಿಲಿಂಗ ಪೆದ್ದಿ ತನ್ನ ವಚನದಲ್ಲಿ; ಅಮೃತ ಸರ್ವರಿಗೂ ಅಮೃತವಾಗಿಪ್ಪುದಲ್ಲದೆ, ಕೆಲಬರಿಗೆ ಅಮೃತವಾಗಿ ಕೆಲಬರಿಗೆ ವಿಷವಾಗದು



ನೋಡಾ, ಎಂತು ಅಂತೆ ಶ್ರೀಗುರು ಸರ್ವರಿಗೆಯೂ ಗುರುವಾಗಿರಬೇಕಯ್ಯಾ ಉರಿಲಿಂಗಪೆದ್ದಿಪ್ರಿಯಾ ವಿಶ್ವೇಶ್ವರಾ ಎಂದು ತಿಳಿಸುತ್ತಾನೆ. ಡೋಹರ ಕಕ್ಕಯ್ಯ, ಆಸೆಯಾಮಿಷ್ಯವಳಿದು ಹುಸಿ ವಿಷಯಂಗಳೆಲ್ಲಾ ಹಿಂಗಿ, ಸಂಶಯ ಸಂಬಂಧ ನಿಸ್ಸಂಬಂಧವಾಯಿತ್ತಯ್ಯಾ ಎನ್ನುತ್ತಾನೆ. ಹೀಗೆ ಅನೇಕ ದಲಿತ ವಚನಕಾರರು ಅಂದಿನ ವಾಸ್ತವತೆಯ ಚಿತ್ರಣಗಳನ್ನು ನೀಡುತ್ತಾರೆ. ಅವರ ನುಡಿಗಳು ಇಂದಿಗೂ ಪ್ರಸ್ತುತವಾಗಿ, ವಾಸ್ತವತೆಗಳಾಗಿ ಉಳಿದಿವೆ ಎಂದು ಅಕ್ಕಮಹಾದೇವಿ ತಿಳಿಸಿದರು. ಉಪ'ತ'ಹ'ಶೀಲ್ದಾರಾದ' ರೇಣುಕಾ, ಎಲ್. ರಮೇಶನಾಯ್ಕ್, ಎಲ್ .ಡಿ.ಜೋಶಿ, ತಾ.ಪಂ. ಕಾರ್ಯ ನಿರ್ವಾಹಕ ಅಧಿಕಾರಿ ಟಿ.ವೆಂಕೋಬಪ್ಪ ಹಾಗೂ ಕರ್ನಾಟಕ ಸರ್ಕಾರ ಅಪೆಕ್‌ನ ಉಪಾಧ್ಯಕ್ಷ ಕೆ.ಎಂ.ಹಾಲಪ್ಪವೇದಿಕೆಯಲ್ಲಿದ್ದರು.

# ಗ್ರಾಮೀಣ ಪ್ರದೇಶದಲ್ಲಿ ಮಾತ್ರ ರಂಗಭೂಮಿ

ಬಳ್ಳಾರಿ

ಆಧುನಿಕ ಮತ್ತು ಕಂಪ್ಯೂಟರ್ ಯುಗದಲ್ಲಿ ರಂಗಭೂಮಿ ಕಲೆ ಮತ್ತು ರಂಗಗೀತೆಗಳು ಕಣ್ಮರೆಯಾಗುತ್ತಿದ್ದು, ಇವುಗಳನ್ನು ಉಳಿಸಿ-ಬೆಳೆಸಿ, ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಪರಿಸ್ಥಿತಿ ಬಂದೊದಗಿದೆ ಎಂದು ರಂಗ ಕಲಾವಿದ, ಹಿರಿಯ ಆದಾತ್ಮ ಪ್ರವಚಕ ಓಂಕಾರಸ್ವಾಮಿ ಹೇಳಿದರು.

ನಗರದ ಕಪ್ಪಗಲ್ಲು ರಸ್ತೆಯ ಶ್ರೀ ಮಹಾಯೋಗಿ ಶಿವ ಲಿಂಗಮ್ಮನಮಠದಲ್ಲಿ ಶ್ರೀ ಶಾರದಾಂಬೆ ಮಹಿಳಾ ಸ್ವಸಹಾಯ ಸಂಘ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ರಂಗಗೀತೆಗಳ ಗಾಯನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗಂಡು ಮೆಟ್ಟಿನ ರಂಗಭೂಮಿ ಕಲೆ ಬಯಲಾಟದಂತಹ ಕಲೆಗಳು ಗ್ರಾಮೀಣ ಪ್ರದೇಶದಲ್ಲಿ ಕೊಂಚ ಜೀವಂತವಾಗಿರುವುದು ಬಿಟ್ಟರೆ ನಗರದ ಪ್ರದೇಶದಲ್ಲಿ ಸಂಪೂರ್ಣ ಕಣ್ಮರೆಯಾಗುತ್ತಿವೆ. ಟಿವಿ, ಧಾರಾವಾಹಿಗಳ ಹಾವಳಿಯಿಂದ ರಂಗಕಲೆ ನಶಿಸಿ ಹೋಗುವ ಹಂತ ತಲುಪಿದ್ದು, ಇದಕ್ಕೆ ಪ್ರತಿಯೊಬ್ಬರೂ ಪ್ರೋತ್ಸಾಹ ನೀಡುವ ಮೂಲಕ ಜೀವಂತವಾಗಿ ಉಳಿಸಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಪ್ರಶಸ್ತಿ ಪುರಸ್ಕೃತರು ಹಾಗು ಸುಜಾತಮ್ಮ ಬಯಲಾಟ ಕಲಾ ಟ್ರಸ್ಟ್ ಅಧ್ಯಕ್ಷೆ ಸುಜಾತಮ್ಮ ಮಾತನಾಡಿ, ರಂಗಭೂಮಿ ಕಲೆ ಮತ್ತು ರಂಗಗೀತೆಗಳನ್ನು ಉಳಿಸಲು ಪ್ರಸ್ತುತ ದಿನಗಳಲ್ಲಿ ಅದು ಗ್ರಾಮೀಣ ಪ್ರದೇಶಗಳಲ್ಲಿ ಬರೀ ಅನಕ್ಷರಸ್ಥರು ಮಾತ್ರ ಮುಂದೆ ಬರುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಅನಕ್ಷರಸ್ಥರೇ ರಂಗಭೂಮಿ ಕಲೆ ಬಯಲಾಟವನ್ನು ಪ್ರದರ್ಶನ ಮಾಡಲು ಮುಂದಾಗುತ್ತಿದ್ದು, ಮುಂದಿನ ದಿನಗಳಲ್ಲಿ ಈ ರಂಗ ಕಲೆಗೆ ಅಕ್ಷರಸ್ಥರೂ ಕೈ ಜೋಡಿಸಿದಾಗ ಮಾತ್ರ ರಂಗಭೂಮಿ ಕಲೆ ಮತ್ತು ರಂಗಗೀತೆಗಳು ಬೆಳೆಯಲು ಸಾಧ್ಯ ಎಂದರು.

ಜನಮನ ಸೂರೆಗೊಂಡ ರಂಗಗೀತೆ ನಂತರ ರಂಗಭೂಮಿ ಕಲಾವಿದೆ ಎರ್ರೆಮ್ಮ ಮತ್ತು ತಂಡ ಹಾಡಿದ ವೀರ ಅಭಿಮನ್ಯು ಕಾಳಗ ಬಯಲಾಟದ ದ್ರೌಪದಿಯ ರಣಗೋಷ್ಠಿ ಯಾಕೋ ಮಗನ ಪೂಜಿಸಲೆಂದೇ ಹೂಗಳ ತಂದೆ ಮತ್ತಿತರೆ ರಂಗಗೀತೆಗಳ ಗಾಯನ ನೆರೆದಿದ್ದ ಜನಮನ ಸೂರೆಗೊಂಡವು. ಎಸ್. ಕೀರ್ತಿ, ಬಿ. ಗೀತಾ ಪ್ರಾರ್ಥನಾ ಗೀತೆ ಹಾಡಿದರು. ಸುಜಾತಮ್ಮ ಬಯಲಾಟ ಕಲಾ ಟ್ರಸ್ಟ್‌ನ ಸದಸ್ಯ ಲಕ್ಷ್ಮೀ ನಾರಾಯಣ ಸ್ವಾಗತಿಸಿದರು. ರಂಗಗೀತೆಗಳ ಗಾಯನಕ್ಕೆ ವೈ, ರಂಗಾರೆಡ್ಡಿ ಹಾರ್ಮೋನಿಯಂ ಮತ್ತು ವೀರೇಶ್ ಅವರು ತಬಲಾ ಸಾಥ್ ನೀಡಿದರು. ಹುಲಿಕುಂಟಿರಾಯ ತೊಗಲುಗೊಂಬೆ ಕಲಾ ತಂಡದ ಅಧ್ಯಕ್ಷ ಕೆ. ಹೊನ್ನೂರಸ್ವಾಮಿ, ಬಿಜೆಪಿ ಮುಖಂಡ ಕೆ. ಹನುಮಂತ, ಹೋಟೆಲ್ ಮಾಲಿಕ ಆನಂದ ಮತ್ತಿತರರು ಉಪಸ್ಥಿತರಿದ್ದರು.




# ಶಿವ ದೇವಾಲಯಗಳಲ್ಲಿ ವಿಶೇಷ ಪೂಜೆ





ಕೊಟ್ಟೂರು

ಪುಣ್ಯ ಕ್ಷೇತ್ರಗಳಲ್ಲಿ ಒಂದಾದ ಶ್ರೀ ಕ್ಷೇತ್ರನಾಥ ಶ್ರೀ ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನ, ಈಶ್ವರಲಿಂಗ ದೇವಸ್ಥಾನ, 108 ಲಿಂಗ ಶಿವನ ದೇವಸ್ಥಾನ, ಈಶ್ವರ ಲಿಂಗ ದೇವಸ್ಥಾನಗಳಲ್ಲಿ ಈಶ್ವರನ ಜಪತಪ ಮಾಡಲು ಮಹಾ ಶಿವರಾತ್ರಿ ಅಂಗವಾಗಿ ಶಿವನಿಗೆ ರುದ್ರಾಭಿಷೇಕ, ವಿಭೂತಿ ಅರ್ಚನೆ, ಬಿಲ್ವಪತ್ರಿಯ ಬಿಲ್ವಾರ್ಚನೆ, ಭಕ್ತರು ವಿಶೇಷ ಪೂಜೆ ಸಲ್ಲಿಸುವುದರ ಮುಖಾಂತರ ಶಿವನ ಕೃಪೆಗೆ ಪಾತ್ರರಾಗಿ ಇಷ್ಟಾರ್ಥಗಳನ್ನು ಪಡೆದುಕೊಂಡರು.

ಮಹಾ ಶಿವರಾತ್ರಿಯ ಅಂಗವಾಗಿ ಬೆಳಿಗ್ಗೆಯಿಂದಲೇ ಶಿವನ ಭಕ್ತರು ಪ್ರತಿಯೊಂದು ಶಿವನ ದೇವಸ್ಥಾನಗಳಾದ ಸೋಮಲಿಂಗೇಶ್ವರ ದೇವಸ್ಥಾನ, ಮರಿಕೊಟ್ಟೂರೇಶ್ವರ ದೇವಸ್ಥಾನ, ಪಂಪಾಪತಿ ದೇವಸ್ಥಾನ, ರಾಮಲಿಂಗೇಶ್ವರ ದೇವಸ್ಥಾನ, ಶ್ರೀ ಕೊಟ್ಟೂರೇಶ್ವರ ದೇವಸ್ಥಾನ, ಗಚ್ಚಿನಮಠ ದೇವಸ್ಥಾನ, ತೊಟ್ಟಿಲುಮಠ, ಮರ್ಕಲ್ ಮಠ ದೇವಸ್ಥಾನ, ಗದ್ದಿ ಕಲ್ಲೇಶ್ವರ ದೇವಸ್ಥಾನ, ಚಾನುಕೋಟಿ ಮಠದ ಶಿವಲಿಂಗ ದೇವಸ್ಥಾನ, 108 ಲಿಂಗ ಶಿವನ ದೇವಸ್ಥಾನ ಸೇರಿದಂತೆ ಶಿವನ ಭಕ್ತರು ರುದ್ರಾಭಿಷೇಕ, ಬಿಲ್ವಾರ್ಚನೆ, ಸೇರಿದಂತೆ ವಿವಿಧ ಬಗೆಯ ಹೂವುಗಳಿಂದ ದೇವಸ್ಥಾನವನ್ನು ಅಲಂಕರಿಸಿ ಭಕ್ತರು ಉಪವಾಸ ವ್ರತಗೈದು ಸ್ವಾಮಿಯ ಇಷ್ಟಾರ್ಥಕ್ಕೆ ಪಾತ್ರರಾದರು.

ಶಿವಪೂಜೆಯನ್ನು ಪ್ರತಿಯೊಂದು ಮನೆಗಳಲ್ಲಿ ಶಿವನಿಗಾಗಿ ಪೂಜೆ ಸಲ್ಲಿಸಿ ಶಿವ ಶಿವ ಎಂದರೆ ಭಯವಿಲ್ಲ, ಶಿವನಾಮಕೆ ಸಾಟಿ ಬೇರೊಂದಿಲ್ಲ ಶಿವ ಭಜನೆಯೊಂದಿಗೆ ಶಿವ ಪಂಚಾಕ್ಷರಿ ಮಂತ್ರ ಜಪದೊಂದಿಗೆ ಶಿವನ ಪೂಜೆಯನ್ನು ಸಲ್ಲಿಸುತ್ತಾ ಮಹಾ ಶಿವರಾತ್ರಿಯ ಅಂಗವಾಗಿ ನೂರಾರು ಭಕ್ತರು ಉಪವಾಸ ವ್ರತ ಕೈಗೊಂಡು ಶಿವನ ಜಪದಲ್ಲಿ ಭಕ್ತಿಯ ಪರಕಾಷ್ಟೆಯನ್ನು ಮೆರೆದು ಇಷ್ಟಾರ್ಥಗಳನ್ನು ಪಡೆದುಕೊಂಡರು.

ಕೊಟ್ಟೂರು ಪಟ್ಟಣದಲ್ಲಿ ಗದ್ದಿ ಕಲ್ಲೇಶ್ವರ ನೂತನ ದೇವಸ್ಥಾನವೊಂದಲ್ಲಿ ಈಶ್ವರನ ಶಿವಲಿಂಗವನ್ನು ದಕ್ಷಿಣಾಭಿಮುಖವಾಗಿ ಪ್ರತಿಷ್ಠಾಪಿಸಿರುವುದರಿಂದ ಶಿವನ ಭಕ್ತರು ತಂಡೋಪತಂಡವಾಗಿ ತೆರಳಿ ಶಿವನ ದರ್ಶನ ಪಡೆದು ಪುಳಕಿತರಾಗಿ ಭಕ್ತಿಯ ಪರಕಾಷ್ಟೆಯಲ್ಲಿ ಮಹಾ ಶಿವರಾತ್ರಿ ಅಂಗವಾಗಿ ಹಿಂದೂ ಧರ್ಮದ ಪ್ರತಿಯೊಬ್ಬರು ಶಿವನ ಜಪ ಮಾಡಿ ಪುನೀತರಾದರು.

ಮಹಾ ಶಿವರಾತ್ರಿ ಅಂಗವಾಗಿ ಪ್ರತಿಯೊಂದು ಮನೆಗಳಲ್ಲಿ ಭಕ್ಷ ಬೋಜನಗಳಾದ ಒಗ್ಗರಣೆ, ಮೆಣಸಿನಕಾಯಿ, ಬಜಿ, ಮೊಸರು, ಉಪ್ಪಿಟ್ಟು, ಕರ್ಜೂರ, ಕಲ್ಲಂಗಡಿ, ದ್ರಾಕ್ಷಿ, ಬಾಳೆಹಣ್ಣು, ಸೇಬು, ಸೇರಿದಂತೆ ವಿವಿಧ ಬಗೆಯ ಹಣ್ಣುಗಳನ್ನು ಶಿವನಿಗೆ ನೈವೇದ್ಯ ಮಾಡಿ ಉಪವಾಸ ವ್ರತಗೊಂಡ ಪ್ರತಿಯೊಬ್ಬ ಶಿವನ ಭಕ್ತರು ಶಿವನ ಪೂಜೆಯ ನಂತರ ಪ್ರಸಾದವನ್ನು ಸ್ವೀಕರಿಸಿ ಶಿವ ಪಂಚಾಕ್ಷರಿ ಮಂತ್ರದೊಂದಿಗೆ ಶಿವನ ಪೂಜೆಯಲ್ಲಿ ತಲ್ಲೀನರಾಗಿರುವುದು ವಿಶೇಷವಾಗಿರುತ್ತದೆ.

# ಶಿಲ್ಪಿಗಳ ಕಾರ್ಯ ಶ್ಲಾಘನೀಯ :ಡಾ.ತಿಪ್ಪೇಸ್ವಾಮಿ ವೆಂಕಟೇಶ್

ಕೊಟ್ಟೂರು

ಲಕ್ಷಾಂತರ ಭಕ್ತರ ಆರಾಧ್ಯ ದೈವ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿಯ ನೂತನ ರಥವನ್ನು ಶಿಲ್ಪಿಗಳು ವರ್ಷದೊಳಗೆ ನಿರ್ಮಾಣ ಮಾಡಿದ್ದು ನಿಜಕ್ಕೂ ಶ್ಲಾಘನೀಯ ಸಂಗತಿ. ಅದ್ಭತವಾಗಿ ನಿರ್ಮಾಣಗೊಂಡಿರುವ ರಥವನ್ನು ನೋಡಿದರೆ ಶಿಲ್ಪಿಗಳ ಕಲಾ ನೈಪುಣ್ಯತೆ ಹಾಗೂ ಅವಿರತ ಶ್ರಮ ಎದ್ದು ಕಾಣುತ್ತಿದೆ ಎಂದು ಜೆಡಿಎಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಾ.ತಿಪ್ಪೇಸ್ವಾಮಿ ವೆಂಕಟೇಶ್ ಹೇಳಿದರು.

ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ಸೋಮವಾರ ಸಂಜೆ ವಿಟಿಎಸ್ ಫೌಂಡೇಶನ್ ಹಾಗೂ ಜಯ ಕರ್ನಾಟಕ ಸಂಘಟನೆ ಜಂಟಿಯಾಗಿ ಆಯೋಜಿಸಿದ್ದ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿಯ ರಥ ನಿರ್ಮಾಣ ಮಾಡಿದ ಶಿಲ್ಪಿ ಹಂಸಾನಂದಚಾರಿ ಹಾಗೂ ಸಹೋದರರಿಗೆ ಸನ್ಮಾನ ಹಾಗೂ ಅಭಿನಂದನ ಕಾರ್ಯಕ್ರಮದಲ್ಲಿ ಮಾತನಾಡಿದರು. ಸರ್ಕಾರ 2 ಕೋಟಿ ರೂಗಳನ್ನು ನೂತನ ರಥ ನಿರ್ಮಾಣಕ್ಕೆ ನೀಡಿತ್ತು. ಆದರೇ ಕೇವಲ ಎಂಟು ತಿಂಗಳ ಅವಧಿಯಲ್ಲಿ ಬೃಹತ್ ರಥಗಡ್ಡೆ ನಿರ್ಮಾಣ ಮಾಡುವ ಸವಾಲನ್ನು ಸ್ವೀಕರಿಸಿದ ಶಿಲ್ಪಿಗಳು ಹಗಲು ರಾತ್ರಿ ಶ್ರಮಿಸಿ ಅದ್ಭುತವಾದ ರಥಗಡ್ಡೆ ನಿರ್ಮಿಸಿದ್ದಾರೆ. ಇದು ನಿಜಕ್ಕೂ ಶ್ಲಾಘನೀಯವಾದದ್ದು ಎಂದರು.

ಸನ್ಮಾನ ಸ್ವೀಕರಿಸಿದ ಶಿಲ್ಪಿ ಹಂಸಾನಂದಚಾರಿ ಮಾತನಾಡಿ, ರಥ ನಿರ್ಮಾಣ ಕಾರ್ಯ ವೇಗವಾಗಿ ನಡೆಯಲು ಕಟ್ಟೀಮನಿದೈವಸ್ಥರು, ಭಕ್ತರು ಹಾಗೂ ಸರ್ಕಾರದ ಸಹಕಾರವೇ ಕಾರಣ ಎಂದರು. ಕೊಟ್ಟೂರೇಶ್ವರ ಸ್ವಾಮಿಯ ರಥ ನಿರ್ಮಾಣದ ಮಾಡಲು ಅವಕಾಶ ನಿಕ್ಕಿದ್ದು ನನ್ನ ಭಾಗ್ಯ ಎಂದು ಭಾವುಕರಾದರು.

ಜಯ ಕರ್ನಾಟಕ ಸಂಟನೆ ಜಂಟಿ ಕಾರ್ಯದರ್ಶಿ ವಿನಯ್ ಜವಳಿ ಮಾತನಾಡಿ, ಕಳೆದ ಬಾರಿ ಸಂಭವಿಸಿದ ಅವಘಡದಿಂದ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿಯ ಲಕ್ಷಾಂತರ ಭಕ್ತರ ಮನಸ್ಸಿಗೆ ಘಾಸಿಯುಂಟಾಗಿತ್ತು. ಆದರೆ ಶಿಲ್ಪಿಗಳು ಕೇವಲ ವರ್ಷದ ಅವಧಿಯಲ್ಲಿ ನೂತನ ರಥಗಡ್ಡೆ ನಿರ್ಮಾಣ ಮಾಡಿ ಭಕ್ತರ ಮನಸ್ಸಿನ ಆತಂಕ ಹಾಗು ದುಗಢವನ್ನು ದೂರಮಾಡಿದ್ದಾರೆ. ಶ್ರೀಸ್ವಾಮಿಯ ರಥಗಡ್ಡೆ ಅಲ್ಪವಧಿಯಲ್ಲಿ ನಿರ್ಮಾಣ ಮಾಡಿ ಲಕ್ಷಾಂತರ ಭಕ್ತರ ಕನಸನ್ನು ನನಸು ಮಾಡಿದ ಶಿಲ್ಪಿಗಳನ್ನು ಸನ್ಮಾಸಿದ ಡಾ.ತಿಪ್ಪೇಸ್ವಾಮಿ ವೆಂಕಟೇಶ್ ಕಾರ್ಯ ನಿಜಕ್ಕೂ ನಮಗೆಲ್ಲ ಸಂತಸ ತಂದಿದೆ ಎಂದರು. ಈ ಸಂದರ್ಭದಲ್ಲಿ ಸನ್ಮಾನ ಸ್ವೀಕರಿಸಿ ಮೌನೇಶಾಚಾರ್, ಜೀತೇಂದ್ರಚಾರ ಮಾತನಾಡಿದರು. ಜೆಡಿಎಸ್‌ನ ಯುವ ಮುಖಂಡರಾದ ಆಕರ್ಷ, ಸೂರಜ್, ಸಂಜಯ್ ಹಾಗೂ ಜಯ ಕರ್ನಾಟಕ ಸಂಘಟನೆಯ ಅಧ್ಯಕ್ಷ ಕೆ.ಮುತ್ತುರಾಜ್, ಕಾರ್ಯಾಧ್ಯಕ್ಷ ನಾಗೇನಳ್ಳಿ ಅಭಿಷೇಕ್, ವೀರೇಂದ್ರ ಪಾಟೀಲ್, ವಿನಯ್ ಗೌಡ, ರಾಜು ಗೌಡ, ಗಗನ, ಕಿರಣ್, ಗುರುಶಾಂತ್ ಗೌಡ, ಜಾಬೀರ್ ಖಾನ್, ವಿನಾಯಕ್ ಇದ್ದರು.



# ಗಣಿನಾಡಲ್ಲಿ ಭಕ್ತಿಪೂರ್ವಕ ಶಿವರಾತ್ರಿ



ಬಳ್ಳಾರಿ

ನಗರದ ಶಿವರಾತ್ರಿ ಹಬ್ಬದ ಹಿನ್ನೆಲೆಯಲ್ಲಿ ಶಿವಾಲಯ, ಶಕ್ತಿದೇವತೆಗಳ ದೇವಾಲಯಗಳಲ್ಲಿ ಬೆಳಿಗ್ಗೆ ಸಮಯದಿಂದಲೇ ಪೂಜೆ ಪುನಸ್ಕಾರ, ಹೋಮ ಹವನಗಳು ನಡೆದವು. ಬಳ್ಳಾರಿ ನಗರದ ಪ್ರಮುಖ ದೇವಾಲಯ ಕೋಟೆ ಮಲ್ಲೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆಗಳು ನಡೆದವು ಮತ್ತು ಸಾವಿರಾರೂ ಭಕ್ತರು ಶಿವನ ದರ್ಶನವನ್ನು ಪಡೆದುಕೊಂಡರು ಮತ್ತು ಲಿಂಗಕ್ಕೆ ಪೂಜೆ ಸಲ್ಲಿಸಿದರು. ಕೆಲವರು ಅಭಿಷೇಕ ಸಲ್ಲಿಸುವ ಮೂಲಕ ಶಿವನೀಗೇ ಪಾತ್ರರಾದರು. ಬಳ್ಳಾರಿ ಮ್ರಮುಖ ದೇವಿ ಕನಕ ದುರ್ಗಮ್ಮ ದೇವಸ್ಥಾನದಲ್ಲಿ ವಿಶೇಷ ಪೂಜೆಯನ್ನು ಮಾಡಲಾಗಿತು. ರಾತ್ರಿ ಜಾಗರಣೆ, ನಗರದ ಅನೇಕ ಕಡೆ ದೇವಸ್ಥಾನಗಳಲ್ಲಿ , ಧಾರ್ಮಿಕ ವಿಛಾರಗಳು, ಭಜನೆ, ಮನೋರಂಜನೆಯ ಕಾರ್ಯಕ್ರಮಗಳು ನಡೆಯುತ್ತೇ ಎಂದು ತಿಳಿದು ಬಂದಿದ್ದೆ.

ಶ್ರೀರಾಮುಲು ನಿವಾಸದಲ್ಲಿ ಲಕ್ಷ ದೀಪೋತ್ಸವ :ಬಳ್ಳಾರಿಯ ಸಂಸದ ಬಿ ಶ್ರೀರಾಮುಲು ಅವರ ಬಳ್ಳಾರಿ ನಗರದ ಹಾವಂಭಾವಿಯ ನಿವಾಸದಲ್ಲಿ ಇಂದು ಸಂಜೆ ಲಕ್ಷದೀಪೋತ್ಸವವನ್ನು ಆಯೋಜಿಸಲಾಗಿದೆ. ಶಿವರಾತ್ರಿಯ ಹಿನ್ನೆಲೆಯಲ್ಲಿ ಸಂಸದ ಶ್ರೀರಾಮುಲು ದೀಪೋತ್ಸವವನ್ನು ಆಯೋಜಿಸಿದ್ದು, ಈ ಕಾರ್ಯಕ್ರಮದಲ್ಲಿ ಅವರ ಕುಟುಂಬಸ್ಥರು, ಸಂಬಂಧಿಕರು, ಗೆಳೆಯರು, ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಭಾಗಿಯಾಗಲಿದ್ದಾರೆ ಎಮದು ತಿಳಿದು ಬಂದಿದೆ. ಶಿವರಾತ್ರಿ ಹಬ್ಬದ ಪ್ರಯುಕ್ತ ಸಂಸದ ಶ್ರೀರಾಮುಲು ಬೆಳಿಗ್ಗೆ ಶಿವಪೂಜೆ ಮಾಡಿದರು. ಕುಟುಂಬದ ಸದಸ್ಯರು ಹಾಗೂ ಮನೆಯ ಕೆಲಸಗಾರರು ಸಂಜೆಗೆ ಆಯೋಜಿಸಲಾಗಿರುವ ಲಕ್ಷದೀಪೋತ್ಸವದ ತಯಾರಿಯಲ್ಲಿ ತೊಡಗಿಕೊಂಡಿರುವ ದೃಶ್ಯಗಳು ಶ್ರೀರಾಮುಲು ನಿವಾಸದಲ್ಲಿ ಕಂಡು ಬಂದವು. ಸಂಜೆ 6.30 ರ ವೇಳೆಗೆ ಲಕ್ಷದೀಪೋತ್ಸವ ನಡೆಯಲಿದ್ದು ಈ ಭಕ್ತಿಪೂರ್ವಕ ಸಂಭ್ರಮದಲ್ಲಿ ಸಾರ್ವಜನಿಕರು ಕೂಡ ಭಾಗಿವಹಿಸಲು ಮುಕ್ತ ಅವಕಾಶವನ್ನು ನೀಡಲಾಗಿದೆ ಎಂದರು. ನಗರದ ಪ್ರಮುಖ ತೇರುಬೀದಿನಲ್ಲಿ ನವಕರ್ನಾಟಕ ಯುವಶಕ್ತಿ ಸಂಘಟನೆಯಿಂದ ಬಳ್ಳಾರಿಯ ತೇರು ಬೀದಿಯ ದೊಡ್ಡ ಮಾರ್ಕೆಟ್ ನೀಲಕಂಠೇಶ್ವರ್ ದೇವಾಲಯದ ಹತ್ತಿರ ರಾತ್ರಿ ಹತ್ತು ಗಂಟೆಗೆ ಮಹಾರಾತ್ರಿ ಮನೋರಂಜನೆ ಕಾರ್ಯಕ್ರಮ ನಡೆಯಿತು.'ು ಕೊಪ್ಪಳ ಮಾರೇಶ್ ಮತ್ತು ಸಂಗಡಿಗರು ಮನರಂಜನಾ ಕಾರ್ಯಕ್ರಮ ನೀಡಿದರು. ಕೊಪ್ಪಳದ ನಾಗರಾಜ್, ಬಳ್ಳಾರಿಯ ಕಾಳಿದಾಸ್ ಹಾಸ್ಯ ರಸದೂತಣ ನೀಡಿದರು.

ನೀರು ಅತ್ಯ ಮೂಲ್ಯ ಮಿತ ವಾಗಿ ಬಳಸಿ

# ಮುಂದಿನ ಬಜೆಟ್ ನಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಜಾರಿ

ಕೂಡ್ಲಿಗಿ

ಮುಂದಿನ ಬಜೆಟ್ ನಲ್ಲಿ ತಾಲ್ಲೂಕಿಗೆ ಭದ್ರಾ ಮೇಲ್ದಂಡೆ ಯೋಜನೆ ಜಾರಿಗೊಳ್ಳುವ ವಿಶ್ವಾಸವಿದೆ ಎಂದು ಕೂಡ್ಲಿಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುಳಿಗಿ ವೀರೇಂದ್ರ ಕುಮಾರ್ ಹೇಳಿದರು. ಅವರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡುತ್ತ, ಹೊಸಪೇಟೆಯಲ್ಲಿ ನಡೆದ ಜನಾಶಿರ್ವಾದ ಸಮಾವೇಶ ಯಶಸ್ವಿಯಾದ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ಕುಕುನೂರಿನಲ್ಲಿ ನಡೆದ ಅಭಿನಂದನ ಸಭೆಯಲ್ಲಿ ಬಳ್ಳಾರಿ ಜಿಲ್ಲೆಯ ಬ್ಲಾಕ್ ಅಧ್ಯಕ್ಷರು ಸೇರಿದಾಂತೆ ಎಲ್ಲಾ ನಾಯಕರು ಭಾಗಿಯಾಗಿದ್ದೇವು. ಈ ಸಂದರ್ಭದಲ್ಲಿ ಎಐಸಿಸಿ ಅಧ್ಯಕ್ಷ ರಾಹುಲ್ ಗಾಂಧಿ ಜಿಲ್ಲೆಯಲ್ಲಿ ಅಭಿವೃದ್ಧಿಯಾಗಬೇಕಾದ ವಿಷಯಗಳನ್ನು ತಿಳಿಸುವಂತೆ ಹೇಳಿದ್ದರು. ಜಿಲ್ಲಾ ಪಂಚಾಯ್ತಿ ಸದಸ್ಯ ನರಸಿಂಹಗಿರಿ ವೆಂಕಟೇಶ್, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹಡಗಲಿ ವೀರಭದ್ರಪ್ಪ, ಎಪಿಎಂಸಿ ಉಪಾಧ್ಯಕ್ಷ ಕಾವಲ್ಲಿ ಶಿವಪ್ಪ ನಾಯಕ, ಯುವ ಕಾಂಗ್ರೆಸ್ ಕಾರ್ಯದಾರ್ಶಿ ನೌಷದ್, ಬ್ಲಾಕ್ ಎಸ್ಟಿ ಘಟಕದ ಅಧ್ಯಕ್ಷ ಎಂ. ರಾಘವೇಂದ್ರ, ಕಾರ್ಮಿಕ ಘಟಕದ ಅಧ್ಯಕ್ಷ ಎನ್. ದುರುಗೇಶ, ವಕ್ತಾರ ಕಾಟಮಲ್ಲಿ ಕೊಟ್ರೇಶ್ ಮುಂತಾದವರು ಇದ್ದರು.



ಹಗರಿಬೊಮ್ಮನಹಳ್ಳಿ ತಾಲೂಕಿನ ಅಲಬೂರು ಗ್ರಾಮದ ಶ್ರೀಮದ್ ಸದ್ಭಾವನಾ ಸಮಾಜ ರೆಡ್ಡಿಯವರು ಬೀರೇಶ್ವರಸ್ವಾಮಿ ಪೂಜೆ ನಿಮಿತ್ಯ ವಚನ ಗಾಯನ ಮತ್ತು ಜಾನಪದ ಗೀತೆ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಯೋಜಿತದಲ್ಲಿ ನಡೆಸಲಾಯಿತು.

# ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮ

# ಮಕ್ಕಳ ಅಪೌಷ್ಠಿಕತೆ ನಿರ್ಮೂಲನೆಗೆ ಕೈಜೋಡಿಸಿ:ನ್ಯಾ.ಅಂದ್ರಾಳ್

ಬಳ್ಳಾರಿ

ಮಕ್ಕಳಲ್ಲಿ ಅಪೌಷ್ಠಿಕತೆ ಹೊಗಲಾಡಿಸುವ ನಿಟ್ಟಿನಲ್ಲಿ ಐಪ್ಸ್(ಐಕ್ಲಿ ಐರಾನ್ ಆ್ಯಂಡ್ ಫೊಲಿಕ್ ಆ್ಯಸಿಡ್),ಕಬ್ಬಿಣದ ಮಾತ್ರೆ, ಅಲ್ಬಂಡಜೋಲ್ ಮಾತ್ರೆ ನೀಡಿಕೆ ಸೇರಿದಂತೆ ವಿವಿಧ ಯೋಜನೆಗಳನ್ನು ಹಮ್ಮಿಕೊಂಡಿದ್ದು, ಅವುಗಳನ್ನು ಪರಿಣಾಮಕಾರಿಯಾಗಿ ತಲುಪಿಸುವ ನಿಟ್ಟಿನಲ್ಲಿ ಶಿಕ್ಷಕರು ಸೇರಿದಂತೆ ಎಲ್ಲರು ಕೈಜೋಡಿಸಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಸ್.ಬಿ.ಅಂದ್ರಾಳ್ ಹೇಳಿದರು.

ರಾಷ್ಟ್ರೀಯ ಜಂತುಹುಳು ನಿವಾರಣಾ ದಿನದ ಅಂಗವಾಗಿ ಜಿಲ್ಲಾಡಳಿತ,ಜಿಪಂ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ನಗರದ ಆಜಾದ್ ಪ್ರೌಢಶಾಲೆ ಆವರಣದಲ್ಲಿ ಸೋಮವಾರ ಏರ್ಪಡಿಸಿದ್ದ ಮಕ್ಕಳಿಗೆ ಮಾತ್ರೆ ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಕ್ಕಳ ಅಪೌಷ್ಠಿಕತೆಗೆ ನಾನಾ ಕಾರಣಗಳಿದ್ದು, ಅವುಗಳನ್ನು ಹೊಗಲಾಡಿಸಿ ನಮ್ಮ ರಾಷ್ಟ್ರದ ಭಾವಿ ಪ್ರಜೆಗಳನ್ನು ಸದೃಢರನ್ನಾಗಿ ಬೆಳೆಸುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸರಕಾರದ ವಿವಿಧ ಯೋಜನೆಗಳನ್ನು ಅವರಿಗೆ ಮುಟ್ಟುವಂತೆ ನೋಡಿಕೊಳ್ಳುವುದು ಅಗತ್ಯವಾಗಿದೆ ಎಂದರು.

ಸರಕಾರದಿಂದ ಸಾರ್ವಜನಿಕರಿಗೆ ಸಿಗುವ ಸೌಲಭ್ಯಗಳ ಕುರಿತಂತೆ ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ಕಳೆದ ಡಿಸೆಂಬರ್ ಮತ್ತು ಜನವರಿ ತಿಂಗಳಲ್ಲಿ 50 ಕಾರ್ಯಕ್ರಮಗಳನ್ನು ಮಾಡಲಾಗಿದ್ದು,



ಅದರಲ್ಲಿ 40 ಕಾರ್ಯಕ್ರಮಗಳು ಮಕ್ಕಳ ಹಕ್ಕುಗಳು ಮತ್ತು ಅವರ ಸಂರಕ್ಷಣೆಗೆ ಸಂಬಂಧಿಸಿದವುಗಳಾಗಿವೆ ಎಂದು ವಿವರಿಸಿದ ಅಂದ್ರಾಳ್ ಅವರು, ಶಿಕ್ಷಣ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವತಿಯಿಂದ ಮಕ್ಕಳಿಗೆ ಲಭ್ಯವಿರುವ ಸೌಲಭ್ಯಗಳು, ಇದುವರೆಗೆ ಅವರಿಗೆ ಕಲ್ಪಿಸಲಾಗಿರುವ ಸೌಲಭ್ಯಗಳ ಕುರಿತು ನಮ್ಮ ಪ್ರಾಧಿಕಾರದ ವತಿಯಿಂದ ಸಮೀಕ್ಷೆ ನಡೆಸಿ ವಿಶೇಷ ದಾಖಲೆಗಳು(ಸ್ಪೇಶಲ್ ಡಾಕ್ಯುಮೆಂಟ್ ) ಸಿದ್ಧಪಡಿಸುತ್ತಿದ್ದೇವೆ ಎಂದರು.ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಜಿ.ರಮೇಶಬಾಬು ಮಾತನಾಡಿ, ಪ್ರಸ್ತುತ ಜಿಲ್ಲೆಯಲ್ಲಿ ಅಂಗನವಾಡಿಯ 1 ರಿಂದ 6 ವರ್ಷದೊಳಗಿನ 3,18,740 ಮಕ್ಕಳು, ಶಾಲೆ ಕಾಲೇಜುಗಳಲ್ಲಿಯ 6 ರಿಂದ 19 ವರ್ಷದೊಳಗಿನ 4,04,953 ಮಕ್ಕಳು ಸೇರಿದಂತೆ ಒಟ್ಟು 7,64,693 ಮಕ್ಕಳಿಗೆ ಮಾತ್ರೆ ನುಂಗಿಸುವ ಗುರಿ ಹೊಂದಲಾಗಿದೆ ಎಂದರು.

ಜಿಲ್ಲೆಯ 2,393 ಅಂಗನವಾಡಿ ಕೇಂದ್ರಗಳು,ಸರಕಾರಿ ಹಾಗೂ ಅನುದಾನಿತ 2255 ಶಾಲೆಗಳು, 783 ಖಾಸಗಿ ಶಾಲೆಗಳು ಹಾಗೂ 63 ಪದವಿಪೂರ್ವ ಕಾಲೇಜುಗಳಲ್ಲಿ ಏಕಕಾಲಕ್ಕೆ ಮಾತ್ರೆ ನುಂಗಿಸಲಾಗುತ್ತಿದೆ ಎಂದು ವಿವರಿಸಿದ ಡಿಎಚ್‌ಒ ಡಾ.ರಮೇಶಬಾಬು ಅವರು, ಸಾರ್ವಜನಿಕರು ಫೆ.10ರಿಂದ 17ರವರೆಗೆ ತಮ್ಮ ಮಕ್ಕಳನ್ನು ತಪ್ಪದೆ ಸಂಬಂಧಿಸಿದ ಅಂಗನವಾಡಿ, ಶಾಲೆ ಕಾಲೇಜುಗಳಿಗೆ ಕರೆದು ಕೊಂಡು ಹೋಗಿ ಮಾತ್ರೆ ನುಂಗಿಸಿ ಜಂತು ಹುಳು ನಿವಾರಣೆಯ ಜೋತೆಗೆ ಮಕ್ಕಳನ್ನು ಜಂತು ಹುಳು ಸೋಂಕಿನಿಂದ ಆಗುವ ತೊಂದರೆಯನ್ನು ತಡೆಗಟ್ಟಲು ಮುಂದಾಗಬೇಕು ಎಂದರು.

ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ಎಂ. ಎಚ್.ರವೀಂದ್ರನಾಥ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಜಂತುಹುಳು ನಿವಾರಣಾ ದಿನದ ಧ್ಯೆಯೋದ್ದೇಶಗಳನ್ನು ವಿವರಿಸಿದರು.

ಅಲ್ಬಂಡಜೋಲ್ ಮಾತ್ರೆಯನ್ನು ಸೇವಿಸುವುದರಿಂದ ದೈನಂದಿನ ಕಾರ್ಯಚಟುವಟಿಕೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳಲು ಸಹಕಾರಿಯಾಗುವುದರ ಜೊತೆಗೆ ಒಬ್ಬರಿಂದ ಒಬ್ಬರಿಗೆ ಸೊಂಕು ಹರಡುವುದನ್ನು ತಡೆಗಟ್ಟುವ ಮೂಲಕ ಜಂತುಹುಳು ಸೋಂಕನ್ನು ತಡೆಗಟ್ಟಬಹುದು. ಅಲ್ಲದೆ ಕೈಗಳನ್ನು ಸ್ವಚ್ಛವಾಗಿಡುವುದರಿಂದ, ಶುದ್ದ ನೀರು ಕುಡಿಯುವುದರಿಂದ, ಹಣ್ಣು ಮತ್ತು ತರಕಾರಿಗಳನ್ನು ಶುದ್ದ ನೀರಿನಿಂದ ತೊಳೆಯುವುದರಿಂಧ, ಆಹಾರ ಪದಾರ್ಥ ಮುಚ್ಚಿಡುವುದರಿಂದ, ಪಾದರಕ್ಷೆಗಳನ್ನು ಬಳಸುವುದರಿಂದ, ಶೌಚಾಲಯ ಬಳಕೆಯಿಂದ, ಸುತ್ತಲಿನ ಪರಿಸರ ಸ್ವಚ್ಛವಾಗಿಡುವುದರಿಂಧ ಆಹಾರ ಸೇವನೆ ಮೊದಲು ಹಾಗೂ ಶೌಚದ ನಂತರ ಕೈಗಳನ್ನು ಸಾಬುನಿನಿಂದ ತೊಳೆಯುವುದರಿಂದ ಪರೋಕ್ಷವಾಗಿ ಜಂತು ಹುಳು ಸೊಂಕು ತಡೆಯಬಹುದು ಎಂದರು.ಈ ಸಂದರ್ಭದಲ್ಲಿ ಕುಷ್ಠರೋಗ ನಿರ್ದೇಶಾನಾಲಯದ ಉಪನಿರ್ದೇಶಕಿ ಡಾ.ಬಿ.ಎನ್.ರಜನಿ, ಜಿಲ್ಲಾಸ್ಪತ್ರೆಯ ಸರ್ಜನ್ ಡಾ.ಎನ್.ಬಸರೆಡ್ಡಿ, ಎಫ್‌ಡಬ್ಲ್ಯೂಒ ಡಾ.ವಿ.ವಿಜಯಲಕ್ಷ್ಮೀ, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ನಿಜಾಮುದ್ದೀಣ್, ಡಿಎಸ್‌ವಿ ಡಾ.ಅನಿಲ್ ಕುಮಾರ, ಎಂಎಕೆ ಅಜಾದ್ ಪ್ರೌಢಶಾಲೆಯ ಮುಖ್ಯಗುರು ರಾಮಾಂಜನೇಯ, ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಗುರು ಗೋವಿಂದಮ್ಮ, ವೈದ್ಯಾಧಿಕಾರಿ ಅತ್ರೀಯಾಬೇಗಂ ಇದ್ದರು.ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ್ ಅವರು ನಿರೂಪಿಸಿದರು. ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಿಬ್ಬಂದಿ ಹಾಗೂ ಶಾಲಾ ಶಿಕ್ಷಕರು ಇದ್ದರು.

# ಗುರು ಸ್ಮರಣೆ ಪುಣ್ಯದ ಕಾರ್ಯ



ಹಗರಿಬೊಮ್ಮನಹಳ್ಳಿ

ಮಕ್ಕಳಿಗೆ ಅಕ್ಷರ ಜ್ಞಾನವನ್ನು ಧಾರೆ ಎರೆಯುವ ಮೂಲಕ ಜೀವನಕ್ಕೆ ಬೆಳಕು ನೀಡುವ ಗುರುಗಳನ್ನು ಸ್ಮರಿಸುವುದು ಪುಣ್ಯದ ಕಾರ್ಯವೆಂದು ಕೊಪ್ಪಳ ಲೋಕಾಯುಕ್ತ ಇನ್ಸಪೆಕ್ಟರ್ ಡಿ.ಹುಲುಗಪ್ಪ ಹೇಳಿದರು.

ತಾಲೂಕಿನ ಹಂಪಾಪಟ್ಟಣ ಗ್ರಾಮದ ಚಂದ್ರಮೌಳೇಶ್ವರ ಪ್ರೌಡಶಾಲೆಯಲ್ಲಿ 2002-03 ನೇ ಸಾಲಿನ ಹಳೇ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಗುರುವಂದನೆ ಹಾಗೂ ಶಾಲೆಯ ಹಿರಿಯ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಒಂದಕ್ಷರ ಕಲಿಸಿದಾತ ಗುರು ಎಂಬಂತೆ ಪ್ರಾಥಮಿಕ, ಪ್ರೌಢ ಶಾಲೆಗಳ ಶಿಕ್ಷಕರು ವಿದ್ಯಾರ್ಥಿಗಳ ಸಂಪೂರ್ಣ ಶ್ರೆಯೋಬ್ಬಿವೃದ್ಧಿಗಾಗಿ ತಮ್ಮನ್ನು ತಾವು ಅರ್ಪಿಸಿಕೊಳ್ಳುವುದು ಶ್ಲಾಘನೀಯ. ವಿದ್ಯಾರ್ಥಿಯೊಬ್ಬನ ಜೀವನದ ದಿಕ್ಕು ಬದಲಾಗಲು ವಿದ್ಯಾರ್ಥಿ ಜೀವನ ಅಡಿಪಾಯವಿದ್ದಂತೆ ಎಂದರು. ಹಳೇ ವಿದ್ಯಾರ್ಥಿಗಳ ಪರವಾಗಿ ಕೆಎಸ್ ಆರ್‌ಟಿಸಿ ಅಧಿಕಾರಿ ಪಿ.ವೈ.ನಾಯ್ಕ ಮಾತನಾಡಿ, ನಿಸ್ವಾರ್ಥವಾದ ಸೇವಾ ಮನೋಭಾವದಿಂದ ವಿಧ್ಯೆ ಧಾನ ಮಾಡುವ ಶಿಕ್ಷಕರ ಋಣ ತೀರಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಿಲ್ಲ ಎಂದರು.

ಈ ವೇಳೆ ಪ್ರೌಢಶಾಲೆಯಲ್ಲಿ ಸೇವೆಗೈದ ಶಿಕ್ಷಕರನ್ನು ಹಳೇ ವಿದ್ಯಾರ್ಥಿಗಳು ಮತ್ತು ಹಳೇ ವಿದ್ಯಾರ್ಥಿಗಳಾದ ಡಿ.ಹುಲುಗಪ್ಪ, ಪಿ.ವೈ.ನಾಯ್ಕರವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಸಾನಿಧ್ಯವನ್ನು ತೆಗ್ಗಿನಮಠದ ವರಸದ್ಯೋಜಾತ ಶಿವಾಚಾರ್ಯ ವಹಿಸಿದ್ದರು. ಬಿಇಒ ಶೇಖರಪ್ಪ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಪ್ರಾಂಶುಪಾಲ ಟಿ.ಪ್ರಸನ್ನಾಚಾರ್ಯ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ಯೋಜನಾಧಿಕಾರಿ ಚಂದ್ರಶೇಖರ, ಸುನೀಲ್ ಪತ್ರಿ ಹುಬ್ಬಳ್ಳಿ, ಹಿರಿಯ ವಿದ್ಯಾರ್ಥಿಗಳಾದ ಮಂಜುನಾಥ, ಯು.ಕನಕಪ್ಪ, ವಿ.ಹನುಮಂತ, ಹೆಚ್.ಡಿ.ಪರಶುರಾಮ್, ಕೆ.ಎಸ್. ಹುಲುಗಪ್ಪ, ಎಸ್.ಉಮೇಶ, ಪ್ರಶಾಂತ, ವಿ.ನಿಂಗರಾಜ್ ಲೋಕೇಶನಾಯ್ಕ, ಎಸ್.ಮಹೇಶ ಮತ್ತಿತರರಿದ್ದರು. ಶಿಕ್ಷಕರಾದ ಉಮೇಶ, ಹುಲುಗಪ್ಪ ನಿರೂಪಿಸಿದರು.